# ಮತ್ತೆ ಒಂದಾದ 'ಅಯೋಗ್ಯ' ಜೋಡಿ

ಆರು ವರ್ಷಗಳ ಹಿಂದೆ ಹಿಟ್ ಆಗಿದ್ದ 'ಅಯೋಗ್ಯ' ಸಿನಿಮಾದ ಮುಂದುವರಿದ ಭಾಗ 'ಅಯೋಗ್ಯ 2' ಘೋಷಣೆಯಾಗಿದ್ದು, ಮೊದಲ ಸಿನಿಮಾದಲ್ಲಿದ್ದ ತಂಡವೇ ಈ ಸಿನಿಮಾಗೂ ಮತ್ತೆ ಒಂದಾಗಿದೆ.

ಈ ಸಿನಿಮಾ ಸ್ಕೇಲ್ ದೊಡ್ಡದಾಗಿದ್ದು, 'ಅಯೋಗ್ಯ' ಸಿನಿಮಾಗಿಂತ ಹೆಚ್ಚು ಗ್ರ್ಯಾಂಡ್ ಆಗಿ ಈ ಸಿನಿಮಾವನ್ನು ತೆರೆಗೆ ತರುವ ಆಲೋಚನೆ ಇದೆ. ರಾಜಕೀಯ, ರೊಮ್ಯಾನ್ಸ್, ಡ್ರಾಮಾ ಎಲ್ಲದರ ಸಮ್ಮಿಶ್ರಣದೊಂದಿಗೆ ಸಿನಿಮಾ ಮೂಡಿಬರುವುದಾಗಿ ತಂಡ ಹೇಳಿಕೊಂಡಿದೆ.

ಈ ಸಿನಿಮಾದಲ್ಲಿಯೂ ನೀನಾಸಂ ಸತೀಶ್, ರಚಿತಾ ರಾಮ್ ಜೋಡಿ ನಟಿಸುತ್ತಿದ್ದಾರೆ. ಈ ಬಗ್ಗೆ ಮಾತನಾಡಿರುವ ಸತೀಶ್, ''ಅಯೋಗ್ಯ' ಸಿನಿಮಾ ತಂಡ ಮತ್ತೆ ಒಂದಾಗುತ್ತಿರುವುದು ಖುಷಿಯಾಗಿದೆ. 'ಅಯೋಗ್ಯ' ಮೊದಲ ಸಿನಿಮಾದ ಯಶಸ್ಸು ಹಾಗೂ ಪ್ರೀತಿ ನಮಗೆ ಇನ್ನೊಂದು ನೆನಪಿನಲ್ಲಿಟ್ಟುಕೊಳ್ಳುವಂಥ ಸಿನಿಮಾ ಮಾಡಲು ಪ್ರೇರಣೆ ನೀಡಿದೆ. ಜನರ ಪ್ರೀತಿಯನ್ನು ಮೊದಲ ಸಿನಿಮಾ ಪಡೆದುಕೊಂಡಿತ್ತು. ಆ ಚಿತ್ರದ ಹಾಡುಗಳೂ ಸಖತ್ ಹಿಟ್ ಆಗಿದ್ದವು. ಈ ಸಿನಿಮಾ ಅದಕ್ಕಿಂತ ಒಂದು ಕೈ ಹೆಚ್ಚಾಗಿರಲಿದೆ'' ಎಂದಿದ್ದಾರೆ.

ಹಲವು ದಿನಗಳಿಂದ ನಿರ್ದೇಶಕ ಎಸ್. ಮಹೇಶ್ ಕುಮಾರ್ ಹಾಗೂ ತಂಡ ಈ ಸಿನಿಮಾ ಕುರಿತು ಕೆಲಸ ಮಾಡುತ್ತಿದೆ. ಮುಂದಿನ ಆಗಸ್ಟ್‌ನಲ್ಲಿ ಈ ಸಿನಿಮಾ ಬಿಡುಗಡೆಗೂ ಯೋಜನೆ ರೂಪಿಸಲಾಗಿದೆ. ■






# ಇಮೇಜ್ ಮುರಿವ ಹಂಬಲದಲ್ಲಿ ಸಂಜನಾ

ಇದುವರೆಗೂ ಸಾದಾಸೀದಾ ಹುಡುಗಿಯ ಪಾತ್ರಗಳಲ್ಲಿ ಹೆಚ್ಚು ಕಾಣಿಸಿಕೊಂಡಿರುವ ನಟಿ ಸಂಜನಾ ಆನಂದ್, ಆ ಇಮೇಜ್ ಮುರಿಯುವ ಪ್ರಯತ್ನದಲ್ಲಿದ್ದು, ತಮ್ಮೊಳಗಿನ ಕೌಶಲ ತೋರುವಂಥ ಪಾತ್ರಗಳಲ್ಲಿ ಜನರ ಮುಂದೆ ಬರುವ ಭರವಸೆ ವ್ಯಕ್ತಪಡಿಸಿದ್ದಾರೆ.

ಸಂಜನಾ ಆನಂದ್ ಹಾಗೂ ನಟ ವಿರಾಟ್ ಅಭಿನಯದ 'ರಾಯಲ್' ಸಿನಿಮಾದ ಹಾಡೊಂದು ಸಾಮಾಜಿಕ ಜಾಲತಾಣದಲ್ಲಿ ಟ್ರೆಂಡ್ ಆಗಿದ್ದು, ಬಹುಜನರ ಗಮನಸೆಳೆದಿದೆ. ಈ ಹಾಡಿನ ಬಗ್ಗೆ ಮಾತನಾಡುತ್ತಲೇ ಹಲವು ವಿಷಯಗಳ ಕುರಿತು ಸಂಜನಾ ಅಭಿಪ್ರಾಯ ಹೊರಹಾಕಿದ್ದಾರೆ.

'ಇಂಥ ಹಾಡುಗಳು ಮೊದಮೊದಲು ಸಾಮಾಜಿಕ ಜಾಲತಾಣಗಳಲ್ಲಿ ನಿಧಾನಗತಿಯಲ್ಲಿ ಶುರುವಾಗಿರುತ್ತವೆ. ಆಮೇಲೆ ಟ್ರೆಂಡ್ ಆಗುತ್ತವೆ. ಇತರೆ ನಟರು ಸಾಮಾಜಿಕ ಜಾಲತಾಣದಲ್ಲಿ ಹುಕ್ ಸ್ಟೆಪ್ ಹಾಕಿದರೆ, ಅದು ಖಂಡಿತ ಹೆಚ್ಚಿನ ಜನರನ್ನು ತಲುಪುತ್ತದೆ' ಎಂದಿದ್ದಾರೆ.

ಸಿನಿಮಾ ಪ್ರಚಾರದಲ್ಲಿ ಸಾಮಾಜಿಕ ಜಾಲತಾಣಗಳ ಪಾತ್ರದ ಕುರಿತೂ ಮಾತನಾಡಿರುವ ಅವರು, 'ಒಂದು ಸಿನಿಮಾ ಹೆಚ್ಚು ಜನರನ್ನು ತಲುಪಲು ಸಾಮಾಜಿಕ ಜಾಲತಾಣಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಹಾಗೇ ಸಿನಿಮಾ ಹಾಡುಗಳು ಎಷ್ಟು ಮಂದಿಯನ್ನು ತಲುಪಿದವು ಎಂಬುದನ್ನು ಕಂಡುಕೊಳ್ಳುವುದೂ ಸುಲಭ ಆಗಿದೆ. ಮನಸ್ಸಿನಲ್ಲಿ ಒಮ್ಮೆ ಹಾಡು ರಿಜಿಸ್ಟರ್ ಆದರೆ, ಅದನ್ನು ಥಿಯೇಟರ್‌ನಲ್ಲಿ ನೋಡುವ ಸಾಧ್ಯತೆಯೂ ಹೆಚ್ಚಾಗುತ್ತದೆ. ಹಾಡನ್ನು ದೊಡ್ಡ ಸ್ಕ್ರೀನ್‌ನಲ್ಲಿ ನೋಡಲೆಂದೇ ಸಿನಿಮಾಗೆ ಹೋಗುತ್ತೇನೆನ್ನುವ ಜನರನ್ನು ನಾನು ನೋಡಿದ್ದೇನೆ' ಎಂದು ವಿವರಿಸಿದ್ದಾರೆ.

ಸಂಜನಾ ಆನಂದ್ ನಟನೆಯ ಮೂರು ಸಿನಿಮಾಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ. ತಾವೀಗ ಪಾತ್ರಗಳ ಆಯ್ಕೆಯಲ್ಲಿ ಜಾಗ್ರತೆಯಿಂದಿದ್ದು, ತಮ್ಮ ಆನ್‌ಸ್ಕ್ರೀನ್ ಇಮೇಜ್ ಕುರಿತು ಪ್ರಜ್ಞಾಪೂರ್ವಕವಾಗಿಯೇ ಬದಲಾವಣೆ ಮಾಡಿಕೊಳ್ಳಲು ಬಯಸಿದ್ದಾರಂತೆ ಸಂಜನಾ. 'ಇದುವರೆಗೂ ನನ್ನ ಬಳಿ ಬಂದ ಎಲ್ಲ ಪಾತ್ರಗಳನ್ನು ಪ್ರೀತಿಯಿಂದ ಮಾಡಿದ್ದೇನೆ. ಇಲ್ಲಿವರೆಗೆ ನಾನು ಬಂದು ನಿಲ್ಲಲು ಆ ಪಾತ್ರಗಳೇ ಕಾರಣವಾಗಿವೆ. ನನ್ನ ಮುಂದಿನ ಸಿನಿಮಾಗಳು ನನ್ನ ನಟನಾ ಕೌಶಲ ತೋರುವ ವಿಭಿನ್ನತೆಯ ಪಾತ್ರಗಳದ್ದು' ಎಂದು ಹೇಳಿದ್ದಾರೆ. ■